ನಾಯಕರು, ವಿವಿಧ ಪಕ್ಷಗಳ ನಾಯಕರು ಮತ್ತು ಸದಸ್ಯರುಗಳು ಸಲ್ಲಿಸಿದ ನಿಲುವಳಿ ಸೂಚನೆಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸರ್ಕಾರದವರು ಈ ಬಗ್ಗೆ ಉತ್ತರ ನೀಡಿರುವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸುತ್ತೇನೆ.

<u>ನಿಯಮ 334 ರ ಮೇರೆಗೆ</u>

<u>ವಿಷಯ : 1) ಮೈಸೂರು, ಬೆಂಗಳೂರು, ಹಾಸನ ಮತ್ತು ಕೋಲಾರ ಜಿಲ್ಲಾ ಆರೋಗ್ಯ ಅಧಿಕಾರಿಗಳು ಯುನಾನಿ ಔಷಧಿಗಳನ್ನು ಅಂಗೀಕೃತ ದರ ಗುತ್ತಿಗೆ ಸಂಸ್ಥೆಗಳಿಂದ ಖರೀದಿ ಮಾಡದೆ ಇರುವುದು.</u>

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅದರಲ್ಲೂ ಮೈಸೂರು, ಬೆಂಗಳೂರು, ಹಾಸನ ಹಾಗೂ ಕೋಲಾರ ಜಿಲ್ಲಾ ಆರೋಗ್ಯ ಅಧಿಕಾರಿಗಳು ಕಳೆದ 2-3 ವರ್ಷಗಳಿಂದ ಯುನಾನಿ ಔಷಧಿಗಳನ್ನು ಅಂಗೀಕೃತ ದರ ಗುತ್ತಿಗೆ ಸಂಸ್ಥೆಗಳಿಂದ (ಆರ್.ಸಿ. ಅಪ್ರೂಡ್) ಖರೀದಿ ಮಾಡದೇ ಇರುವುದರಿಂದ ಸುಮಾರು ಈ ಜಿಲ್ಲೆಗಳಲ್ಲಿರುವ 12 ಯುನಾನಿ ಔಷಧಾಲಯಗಳಲ್ಲಿ ಔಷಧಗಳಿಲ್ಲದೇ ರೋಗಿಗಳಿಗೆ ಬಹಳ ತೊಂದರೆಯುಂಟಾಗಿದೆ. ಆದ್ದರಿಂದ 31ನೇ ಮಾರ್ಚ್ ಒಳಗೆ ಈ ವರ್ಷಕ್ಕೆ ಸಂಬಂಧಪಟ್ಟಂತೆ ಯುನಾನಿ ಔಷಧಿಗಳನ್ನು ಜಿಲ್ಲಾ ಆರೋಗ್ಯ ಅಧಿಕಾರಿಗಳು ಖರೀದಿ ಮಾಡಲು ಆದೇಶ ನೀಡಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿ ಕೋರುತ್ತೇನೆ. ರಾಜ್ಯದಲ್ಲಿರುವ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಔಷಧಾಲಯಗಳು ಆಯಾ ಜಿಲ್ಲೆಗಳ ಜಿಲ್ಲಾ ಪರಿಷತ್ತುಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಆಯಾ ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಮುಖಾಂತರ ಈ ಔಷಾಧಾಲಯಗಳಿಗೆ ಔಷಧಿಗಳನ್ನು ಖರೀದಿಸಲಾಗುತ್ತಿದೆ. ಈ ಔಷಧಾಲಯಗಳಿಗೆ ಔಷಧಿಗಳನ್ನು ಖರೀದಿಸಲು ಅನುದಾನವನ್ನು ಸರ್ಕಾರದಿಂದ ಆಯಾ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆಯಾಗುತ್ತದೆ. ಔಷಧಿಗಳ ದರ ಗುತ್ತಿಗೆಯನ್ನು ಸರ್ಕಾರದ ಅನುಮತಿಯನ್ನು ಪಡೆದು ನಿಗದಿಗೊಳಿಸಿ ಎಲ್ಲಾ ಜಿಲ್ಲಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಈ ಇಲಾಖೆಯಿಂದ ಕಳುಹಿಸಿಕೊಡಲಾಗುತ್ತದೆ. ಮೈಸೂರು, ಬೆಂಗಳೂರು, ಹಾಸನ ಹಾಗೂ ಕೋಲಾರ ಜಿಲ್ಲೆಗಳಲ್ಲಿ 12 ಯುನಾನಿ ಆಸ್ಪತ್ರೆಗಳಿವೆ. ಪ್ರತಿ ಔಷಾಧಾಲಯಕ್ಕೆ 1992-93ರಿಂದ ರೂ. 12,000-00ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲು ಅವಕಾಶವಿರುತ್ತದೆ. ಈ ಪೈಕಿ ಶೇ 60ರ ಮೌಲ್ಯದ ಆಯುರ್ವೇದ ಮತ್ತು ಯುನಾನಿ ಔಷಧಿಗಳನ್ನು (ಪ್ಯಾಕೇಜ್ ಪದ್ಧತಿಯಂತೆ) ಇಲಾಖೆಯ ಕೇಂದ್ರೀಯ ಔಷಾಧಾಗಾರದಲ್ಲಿ ತಯಾರಿಸಿ ಎಲ್ಲಾ ಆಯುರ್ವೇದ ಮತ್ತು ಯುನಾನಿ ಔಷಾಧಾಲಯಗಳಿಗೆ ಪ್ರತಿ ವರ್ಷವೂ ಸರಬರಾಜು ಮಾಡಲಾಗಿದೆ. ಉಳಿದ ಶೇಕಡಾ 40ರ ಮೌಲ್ಯದ ಔಷಧಿಗಳನ್ನು ದರ ಗುತ್ತಿಗೆ ಮುಖಾಂತರ ಕೊಂಡುಕೊಳ್ಳಲು, 1990-91 ಮತ್ತು 1991-92 ನೇ ಸಾಲಿಗೆ ಸರ್ಕಾರಿ ಆದೇಶ ಸಂಖ್ಯೆ ಹೆಚ್.ಎಫ್.ಡಬ್ಲೂ. 90 ದಿನಾಂಕ 1.1.1991ರಲ್ಲಿ ದರ ಗುತ್ತಿಗೆ ನಿಗಧಿಪಡಿಸಿ ಆದೇಶ ಹೊರಡಿಸಲಾಗಿದೆ. ಹಾಗೆಯೇ 1992-93 ನೇ ಸಾಲಿಗೆ ಸರ್ಕಾರಿ ಆದೇಶ ಸಂಖ್ಯೆ ಹೆಚ್.ಎಫ್.ಡಬ್ಲೂ. 206 ಹೆಚ್.ಪಿ.ಸಿ. 92 ದಿನಾಂಕ

12.1.93ರಲ್ಲಿ ದರ ಗುತ್ತಿಗೆ ನಿಗದಿ ಪಡಿಸಿ ಆದೇಶ ಹೊರಡಿಸಲಾಗಿದೆ. ಈ ದರ ಗುತ್ತಿಗೆಯ ಆದೇಶಗಳನ್ನು ಎಲ್ಲಾ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಖರೀದಿ ಮಾಡಲು ಕಳುಹಿಸಿ ಮಾರ್ಚ್ 31ರೊಳಗಾಗಿ ಖರೀದಿಸಲು ನಿರ್ದೇಶನಾಲಯದಿಂದ ತಿಳಿಸಲಾಗಿದೆ. ಆದಾಗ್ಯೂ ದರ ಗುತ್ತಿಗೆ 'ಯುನಾನಿ' ಔಷಧಿಗಳನ್ನು ಕೂಡಲೇ ಖರೀದಿಸಲು ಇನ್ನೊಮ್ಮೆ ಆದೇಶ ನೀಡಲಾಗುವುದು.

2) <u>ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿ ಮಂಜೂರಾತಿ ಸಮಿತಿಯ ರಚನೆ.</u>

ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯಲ್ಲಿ ನೂರಾರು ಕುಟುಂಬಗಳು ಕೃಷಿ ಮಾಡಿಕೊಂಡು ಹಲವಾರು ವರ್ಷಗಳಿಂದ ನೆಲೆಸಿದ್ದಾರೆ. ಸರ್ಕಾರ ಎರಡು ಹೆಕ್ಟೇರು ಭೂಮಿಯನ್ನು ಒತ್ತುವರಿ ಮಾಡಿದ ರೈತನಿಗೆ ಕೊಡುತ್ತಿರುವ ಈ ಸಂದರ್ಭದಲ್ಲಿ ಅರಣ್ಯದಲ್ಲಿ ಕೃಷಿ ಮಾಡಿ ನೆಲೆಸಿದವನಿಗೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ. ನೆರಿಯ, ಪುದುಬೆಟ್ಟು, ಕಳಿಂಜ, ರೆಖ್ಯ, ಶಿಶಿಲ, ಶಿಬಾಜೆ ಗ್ರಾಮಗಳಲ್ಲಿ ಫಾರೆಸ್ಟ್ ಪರಂಬೂಕು ಜಮೀನು ಕೃಷಿಕರು ಆಕ್ರಮಣ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ. ಈ ಜಮೀನು ಪ್ರಸ್ತುತ ರೆವಿನ್ಯೂ ಕಾನೂನಿನಂತೆ ಮಂಜೂರು ಮಾಡಲು ಆಗುತ್ತಿಲ್ಲ. ಆದ್ದರಿಂದ ಫಾರೆಸ್ಟ್ ಭೂಮಿ ಮಂಜೂರಾತಿ ಸಮಿತಿಯನ್ನು ಆದಷ್ಟು ಶೀಘ್ರ ರಚಿಸಿ ಆಕ್ರಮಣ ಮಾಡಿದ ಅರಣ್ಯ ಭೂಮಿಯನ್ನು ಬಡ ಒತ್ತುವರಿದಾರರಿಗೆ ಮಂಜೂರು ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ(ಅರಣ್ಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅರಣ್ಯ ಪ್ರದೇಶದ ಅಕ್ರಮ ಸಾಗುವಳಿಯ ಪ್ರದೇಶವು ಈ ಕೆಳಕಂಡಂತಿದೆ :

1978 ರ ಪೂರ್ವದ ಅಕ್ರಮ ಸಾಗುವಳಿ	29,266 ಪ್ರಕರಣಗಳು	37,422.19 ಹೆಕ್ಟೇರ್‌ಗಳಲ್ಲಿ
1978 ರ ನಂತರ ಅಕ್ರಮ ಸಾಗುವಳಿ	9,542 ಪ್ರಕರಣಗಳು	5, 823.39 ಹೆಕ್ಟೇರ್‌ಗಳಲ್ಲಿ

ದಿನಾಂಕ 27-4-78 ರ ಪೂರ್ವದ ಅರಣ್ಯ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ದಿನಾಂಕ : 10-10-91ರ ಆದೇಶ ಸಂಖ್ಯೆ ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, (ವಾಲ್ಯೂ೦-2)ರಲ್ಲಿ ಇಂತಹ ಅತಿಕ್ರಮಣ ಪ್ರಕರಣಗಳನ್ನು ಸಲ್ಲಿಸಲು ಸಕ್ರಮಗೊಳಿಸಲು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಗಳನ್ನು ಆದೇಶಿಸಿದೆ. ಅರಣ್ಯ ಸಂರಕ್ಷಣೆ ಕಾಯ್ದೆ 1980 ರಂತೆ, ದಿನಾಂಕ : 27-4-78 ರ ಪೂರ್ವದಲ್ಲಿ ಆದ ಅತಿಕ್ರಮಣಗಳನ್ನು ಸಹ ಕ್ರಮಬದ್ಧಗೊಳಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಒಪ್ಪಿಸಬೇಕಾಗುತ್ತದೆ. ಸದರಿ ಸರ್ಕಾರಿ ಆದೇಶ ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ 1980 ರಂತೆ, ಭಾರತ ಸರ್ಕಾರದ ಅನುಮತಿ ಪಡೆಯಲು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಸ್ತಾವನೆಗಳೊಂದಿಗೆ ಕಡತಗಳನ್ನು